ಸ್ವತಃ ಮಹಾನ್ ದೈವಭಕ್ತನಾಗಿದ್ದ ನ್ಯೂಟನ್ನನೇ ಹೇಳಿದ್ದನೆಂಬ ದಾಖಲೆಯಿದೆ. ನ್ಯೂಟನ್ ಸಿದ್ಧಾಂತ ಏನೆಂಬುದೇ ಗೊತ್ತಿಲ್ಲದ ಅನೇಕರು ಈ ಮಾತನ್ನು ನಂಬಿರಲಿಲ್ಲ. ಜೀವಜಂತುಗಳ ಸೃಷ್ಟಿ, ಸ್ಥಿತಿ, ಲಯಗಳೆಲ್ಲ ಈಗಲೂ ಭಗವಂತನ ಕೈಯಲ್ಲಿದೆಯೆಂದೇ ವಾದಿಸುತ್ತಿದ್ದರು. ಆಗ ಡಾರ್ವಿನ್ ಬಂದ. ದೇವರ ಬಗ್ಗೆ ಅಂಥದ್ದೇನೂ ಭಕ್ತಿಯಿರದ ಆತ ವಿಕಾಸವಾದವನ್ನು ಮಂಡಿಸಿ, ದೇವರನ್ನು ಇನ್ನಷ್ಟು ದೂರ ತಳ್ಳಿದ. ವಿಕಾಸದ ನಿಯಮಗಳ ಪ್ರಕಾರ ಯಾವ ಜೀವಿಯ ಸೃಷ್ಟಿಗೂ ಯಾರ ಕೈವಾಡವೂ ಬೇಕಿಲ್ಲವೆಂದು ಹೇಳಿದ. ಡಾರ್ವಿನ್ ವಾದವೂ ಅರ್ಥವಾಗದ ಜನರು ಹೊಸ ವಾದವನ್ನು ಮುಂದಿಟ್ಟರು: ದೇವನು ಮನುಷ್ಯನನ್ನು ನಿರ್ಮಿಸಿ, ಜೀವಲೋಕವನ್ನು ಕಾಯುವ ಕೆಲಸವನ್ನು ಅವನಿಗೇ ವಹಿಸಿ ತಾನು ವಿರಮಿಸಿದ ಎಂದು ಹೇಳತೊಡಗಿದರು. ಅವರ ನಂಬುಗೆಗೆ ತಕ್ಕಂತೆ ಈಗ ಮನುಷ್ಯರೂ ಜೀವಿಗಳ ಸೃಷ್ಟಿಕ್ರಿಯೆಯಲ್ಲಿ ಕೈಯಾಡಿಸತೊಡಗಿದ್ದಾರೆ, ಗೊತ್ತಲ್ಲ? ಆದರೆ, ಈಗಿನ ವರ್ತಮಾನದಲ್ಲಿ ಯುವಾಲ್ ಹರಾರೆ ಎಂಬ ನಾಸ್ತಿಕ ಚಿಂತಕ ಅವತರಿಸಿದ್ದಾನೆ. ಅವನ ಪ್ರಕಾರ, ಆಧುನಿಕ ಮನುಷ್ಯ ತಾನು ಮಾಡಬೇಕಿದ್ದ ಕೆಲಸಗಳನ್ನೆಲ್ಲ ಯಂತ್ರಗಳಿಗೆ ಒಪ್ಪಿಸಿ ತಾನೇ ವಿರಮಿಸಲು ಹೊರಟಿದ್ದಾನೆ. ಬುದ್ಧಿವಂತ ರೋಬಾಟ್‌ಗಳ ವಿಕಾಸ ಹೀಗೇಯೇ ಮುಂದುವರೆದರೆ ಮನುಷ್ಯನಿಗೆ ಅಲ್ಪ ವಿರಾಮ ಅಲ್ಲ, ಪೂರ್ಣವಿರಾಮವೇ ಸಿಗಲಿದೆ ಎಂದು ಹರಾರೆ ಹೇಳುತ್ತಿದ್ದಾನೆ. ಅದೆಷ್ಟು ನಿಜವಾಗುತ್ತದೊ ಗೊತ್ತಿಲ್ಲ. ಅಂತೂ ಮನುಷ್ಯ ನಿರ್ಮಿತಿಯ ಈ ರೋಬಾಟ್‌ಗಳು ಯಾರೂ ವಿರಮಿಸದಂತೆ ಮಾಡುತ್ತಿರುವುದಂತೂ ನಿಜ.

ಈ ಹಂತದಲ್ಲಿ ಕುವೆಂಪು ನೆನಪಾಗುತ್ತಾರೆ. 'ನೂರಾರು ದೇವರನು ನೂಕಾಚೆ ದೂರ' ಎಂದು ಹೇಳಿದ ಅವರು, ಇಳಿಸಂಜೆಯ ಪಕ್ಷಿಗಳ ಸಾಲನ್ನು ನೋಡಿ 'ದೇವರು ರುಜು ಮಾಡಿದನು' ಎಂದರು. ಪ್ರಾಯಶಃ ಅದು ಭಗವಂತನ ರಾಜೀನಾಮೆ ಪತ್ರದ ಕೆಳಗಿನ ಅಂತಿಮ ಸಿಗ್ನೇಚರ್ ಇದ್ದೀತೆಂಬುದು ನನ್ನ ತರ್ಕ. ಅದು ಕುತರ್ಕವೆಂದೇ ಅಂದುಕೊಳ್ಳಿ. ಆದರೆ, ದೇವರನ್ನು ಮಲಗಿಸುವ ಕೆಲಸವನ್ನೂ ಈಗ ಯಂತ್ರಗಳಿಗೇ ಕೊಡುತ್ತಿದ್ದಾರೆ...

—ಎಂಬಲ್ಲಿಗೆ ಈ ಆಧುನಿಕ ಗರುಡಪುರಾಣ ಸಮಾಪ್ತಿ.

### ನಾಗೇಶ ಹೆಗಡೆ

ಪತ್ರಕರ್ತ, ಪರಿಸರವಾದಿ, ವಿಜ್ಞಾನ ಬರಹಗಳ ಲೇಖಕ ನಾಗೇಶ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದ ಬಕ್ಕೆಮನೆ ಎಂಬ ಹಳ್ಳಿಯವರು. 'ಪ್ರಜಾವಾಣಿ'ಯಲ್ಲಿ ಸುಮಾರು 38 ವರ್ಷಗಳಷ್ಟು ದೀರ್ಘ ಕಾಲದಿಂದ ಪ್ರಕಟವಾಗುತ್ತಿರುವ 'ವಿಜ್ಞಾನ ವಿಶೇಷ' ಅಂಕಣದಲ್ಲಿ ವಿಜ್ಞಾನ ಕ್ಷೇತ್ರದ ವಿದ್ಯಮಾನಗಳನ್ನು ಸ್ವಾರಸ್ಯಕರವಾಗಿ ಬರೆಯುತ್ತ ಬಂದಿದ್ದಾರೆ. ಈ ಅಂಕಣ ಅನೇಕ ಓದುಗರಲ್ಲಿ ವಿಜ್ಞಾನದ ಬಗ್ಗೆ ಕುತೂಹಲ, ಅಭಿರುಚಿಯನ್ನು ಹುಟ್ಟಿಸಿದ್ದು ಮಾತ್ರವಲ್ಲ, ಅನೇಕರ ತಿಳಿವಳಿಕೆಯನ್ನು ತಿದ್ದುತ್ತ ಬಂದಿದೆ.

ಅವರ ಮೊದಲ ಪುಸ್ತಕ 'ಇರುವುದೊಂದೇ ಭೂಮಿ' ಪರಿಸರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಅನೇಕ ಚರ್ಚೆಗಳನ್ನು ಹುಟ್ಟುಹಾಕಿದೆ. 40ಕ್ಕೂ ಹೆಚ್ಚು ವಿಜ್ಞಾನ/ಪರಿಸರ ಬರಹಗಳ ಪುಸ್ತಕಗಳನ್ನು ಬರೆದಿರುವ ಹೆಗಡೆ 'ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ' ಹೆಸರಿನ ಲಘುಪ್ರಬಂಧ ಸಂಕಲನವನ್ನೂ, ಮಕ್ಕಳಿಗಾಗಿ 'ಕೆರೆಯಲಿ ಚಿನ್ನ, ಕೆರೆಯೇ ಚಿನ್ನ' ಎಂಬ ಪುಸ್ತಕವನ್ನೂ ಪ್ರಕಟಿಸಿದ್ದಾರೆ. ಕನ್ನಡ ಮಕ್ಕಳ ಸಾಹಿತ್ಯಕ್ಕೆ ಬಿಗ್‌ಲಿಟ್ಲ್ ಬುಕ್ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದು ಪ್ರಸ್ತುತ ಕೃಷಿಕರಾಗಿ ಬೆಂಗಳೂರು ಸಮೀಪದ ಮೈತ್ರಿ ಗ್ರಾಮದಲ್ಲಿ ನೆಲೆಸಿದ್ದಾರೆ.